## ಕರ್ನಾಟಕ ಸರ್ಕಾರ

ಸಂಖ್ಯೆ: ವಾಕೈ 64 ಜಕೈಇ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 03.05.2017.

**ಇವರಿಂದ,**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
ವಿಕಾಸಸೌಧ, ಬೆಂಗಳೂರು.

113
11/5/17

**ಇವರಿಗೆ,**

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು,
ಕೈಮಗ್ಗ ಮತ್ತು ಜವಳಿ ಇಲಾಖೆ,
ಶುಭೋದಯ ಕಾಂಪ್ಲೆಕ್ಸ್ ನಂ 86,
ರೈಲ್ವೆ ಪ್ಯಾರಲಲ್ ರೋಡ್ ಕುಮಾರ ಪಾರ್ಕ್ ಪಶ್ಚಿಮ,
ಬೆಂಗಳೂರು-560 020.

ಮಾನ್ಯರೆ,

ವಿಷಯ: ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ಮಿನಿ ಪವರ್ ಲೂಂ ಪಾರ್ಕ್ ಸ್ಥಾಪಿಸುವ ಯೋಜನೆಯ ಮಾರ್ಗಸೂಚಿಯನ್ನು ಪರಿಷ್ಕರಿಸಿ ಅನುಮೋದನೆ ನೀಡುವ ಕುರಿತು

ಉಲ್ಲೇಖ:
1. ಸರ್ಕಾರದ ಪತ್ರ ಸಂಖ್ಯೆ: ವಾಕೈ 20 ಜಕೈಯೋ 2012, ದಿ: 05.01.2013.
2. ತಮ್ಮ ಪತ್ರ ಸಂಖ್ಯೆ: ಕೈಜಇ/ಜವಳಿ/ಜತ-2/ಮಿ.ಪ.ಪಾ/2012-13/13-14/910, ದಿ: 28.02.2017

- - -

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಪತ್ರದತ್ತ ತಮ್ಮ ಗಮನ ಸೆಳೆಯಲಾಗಿದೆ. ಉಲ್ಲೇಖ (2) ರ ಪತ್ರದಲ್ಲಿ ಕೋರಲಾದಂತೆ, ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ಮಿನಿ ಪವರ್ ಲೂಂ ಪಾರ್ಕ್ ಸ್ಥಾಪಿಸುವ ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಸರಿಸಬೇಕಾದ ಕಾರ್ಯವಿಧಾನಗಳ ಕುರಿತು ಹೊರಡಿಸಲಾದ ಪರಿಷ್ಕೃತ ಮಾರ್ಗಸೂಚಿಯನ್ನು ಇದರೊಂದಿಗೆ ಲಗತ್ತಿಸುತ್ತಾ, ಅದರನ್ವಯ ಯೋಜನೆಯನ್ನು ಅನುಷ್ಠಾನಗೊಳಿಸಲು ಸೂಕ್ತ ಕ್ರಮ ವಹಿಸುವಂತೆ ತಮ್ಮನ್ನು ಕೋರಲು ನಾನು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ
B.V. 4/5/17
**(ಬಿ. ವೆಂಕಟೇಶಮೂರ್ತಿ)**
ಸರ್ಕಾರದ ಉಪ ಕಾರ್ಯದರ್ಶಿ(ಜವಳಿ)(ಪ್ರ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.
03/5/17

DD PL
10/5
10 MAY 2017

ಕರ್ನಾಟಕ ಸರ್ಕಾರ

ಕೈಮಗ್ಗ ಮತ್ತು ಜವಳಿ ಇಲಾಖೆ

ಸಂಖ್ಯೆ: ವಾಕೈ 64 ಜಕೈಇ 2017 ದಿನಾಂಕ: 03.05.2017.

ವಿಷಯ: ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ಮಿನಿ ಪವರ್ ಲೂಂ ಪಾರ್ಕ್ ಸ್ಥಾಪಿಸುವ ಯೋಜನೆಯ ಮಾರ್ಗಸೂಚಿ ಹೊರಡಿಸುವ ಕುರಿತು.

ಸರ್ಕಾರಿ ಪತ್ರ ಸಂಖ್ಯೆ: ವಾಕೈ 20 ಜಕೈಯೋ 2012 ದಿನಾಂಕ: 05. 01. 2013 ರಂದು ಮಿನಿ ಪವರ್ ಲೂಂ ಪಾರ್ಕ್ ಸ್ಥಾಪಿಸಲು ಹಾಗೂ ವಿದ್ಯುತ್ ಮಗ್ಗ ನೇಕಾರರಿಗೆ ಉತ್ಪಾದನಾ ಚಟುವಟಿಕೆ ಹಾಗೂ ಅವರ ಅಭಿವೃದ್ಧಿಗೆ ಕಾಲಬದ್ಧವಾಗಿ ಕಾರ್ಯಕ್ರಮವನ್ನು ಜಾರಿಗೊಳಿಸಲು, ಹಾಗೂ ಯೋಜನೆಯಡಿ ಅನುದಾನ ಬಿಡುಗಡೆ ಮಾಡಲು ಅನುಸರಿಸಬೇಕಾದ ಕಾರ್ಯವಿಧಾನಗಳಿಗೆ ಹೊರಡಿಸಲಾದ ಮಾರ್ಗಸೂಚಿಯನ್ನು ಹಿಂದಕ್ಕೆ ಪಡೆದು ಮಿನಿ ಪವರ್ ಲೂಂ ಪಾರ್ಕ್ ಸ್ಥಾಪಿಸುವ ಪರಿಷ್ಕೃತ ಮಾರ್ಗಸೂಚಿಯನ್ನು ಕೆಳಗಿನಂತೆ ಹೊರಡಿಸಲಾಗಿದೆ.

ಅರ್ಹತೆ:

- ಜವಳಿ ಕೈಗಾರಿಕೋದ್ಯಮಿಗಳು ಒಂದು ಎಸ್. ಪಿ. ವಿ ನೊಂದಾಯಿಸಿಕೊಂಡು ಅದರ ಮೂಲಕ ಈ ಕೆಳಗಿನ ಷರತ್ತುಗಳಿಗೊಳಪಟ್ಟು ಯೋಜನೆಯನ್ನು ಅನುಷ್ಠಾನಗೊಳಿಸತಕ್ಕದ್ದು.
- ಜವಳಿ ಕೈಗಾರಿಕಾ ಉದ್ಯಮದಲ್ಲಿ ಆಸಕ್ತಿ ಇರುವ ಕನಿಷ್ಟ 25 ಫಲಾನುಭವಿಗಳು ಇರತಕ್ಕದ್ದು.
- ಅಭಿವೃದ್ಧಿ ಪಡಿಸುತ್ತಿರುವ ಮಿನಿ ಪವರ್ ಲೂಂ ಪಾರ್ಕ್ ಕನಿಷ್ಟ 05 ಎಕರೆ ಪ್ರದೇಶದಲ್ಲಿರತಕ್ಕದ್ದು.
- ಪವರ್ ಲೂಂ ಪಾರ್ಕ್ ಸ್ಥಾಪನೆಗೆ ಮೂಲ ಸೌಲಭ್ಯ ಅಭಿವೃದ್ಧಿಗಾಗಿ ಸರ್ಕಾರದ ಅನುದಾನ ರೂ. 100.00 ಲಕ್ಷಗಳನ್ನು ಹೊರತು ಪಡಿಸಿ ತಗಲುವ ಹೆಚ್ಚುವರಿ ವೆಚ್ಚವನ್ನು ಎಸ್. ಪಿ. ವಿ. ಸಂಸ್ಥೆಯೇ ಭರಿಸತಕ್ಕದ್ದು.

ಯೋಜನಾ ಘಟಕಗಳು:

ಮೂಲಭೂತ ಸೌಲಭ್ಯಗಳು:-

- ರಸ್ತೆ
- ಒಳಚರಂಡಿ ವ್ಯವಸ್ಥೆ.
- ನೀರು ಸರಬರಾಜು.
- ವಿದ್ಯುತ್ ಸರಬರಾಜು (ಎಕ್ಸ್‌ಪ್ರೆಸ್ ಫೀಡರ್).
- ಅವಶ್ಯಕತೆಗನುಗುಣವಾಗಿ ಇತರೆ ಮೂಲಭೂತ ಸೌಲಭ್ಯಗಳು.

ಸಾಮಾನ್ಯ ಸೌಲಭ್ಯಗಳು:-

- ಮಗ್ಗ ಪೂರ್ವ ಘಟಕ.
- ಮಗ್ಗಪೂರ್ವ ಯಂತ್ರಗಳು.
- ಗೊದಾಮು / ದಾಸ್ತಾನು ಮಳಿಗೆ.

ಘಟಕ ವೆಚ್ಚ (ಅಂದಾಜು):

ಮೂಲಭೂತ ಸೌಲಭ್ಯಗಳು:-

| | | |
|---|---|---|
| | | (ರೂ. ಲಕ್ಷಗಳಲ್ಲಿ) |
| 1. | ರಸ್ತೆ | : 20.00 |
| 2. | ಒಳಚರಂಡಿ ವ್ಯವಸ್ಥೆ. | : 05.00 |
| 3. | ವಿದ್ಯುತ್ ಸರಬರಾಜು (ಎಕ್ಸ್‌ಪ್ರೆಸ್ ಫೀಡರ್). | : 20.00 |
| 4. | ಬಾರ್ಬೆಡ್ ವೈರ್ ಫೆನ್ಸಿಂಗ್ | : 03.00 |
| 5. | ಮಗ್ಗ ಪೂರ್ವ ಯಂತ್ರೋಪಕರಣಗಳು (ಟ್ವಿಸ್ಟಿಂಗ್/ ವೈಂಡಿಂಗ್/ ವಾರ್ಪಿಂಗ್/ ಫಿನಿಷಿಂಗ್) | : 18.00 |
| 6. | ನೀರು ಸರಬರಾಜು. | : 05.00 |
| 7. | ಸಾಮಾನ್ಯ ಸೌಲಭ್ಯ ಕೇಂದ್ರ ನಿರ್ಮಾಣ (1500 ಚ. ಅ) | : 12.00 |
| 8. | ಗೋದಾಮು ಮತ್ತು ವಾಹನ | : 17.00 |
| | ಒಟ್ಟು ಯೋಜನಾ ವೆಚ್ಚ | : 100.00 |

ಸ್ಪೆಷಲ್ ಪರ್ಪಸ್‌ನ (ಎಸ್. ಪಿ. ವಿ) ಪಾತ್ರ:

1. ಮಿನಿ ಪವರ್ ಲೂಂ ಪಾರ್ಕ್‌ಗೆ ಸಂಬಂಧಿಸಿದ ವಿವರವಾದ ಯೋಜನಾ ವರದಿ (DPR) ಯನ್ನು ಪೂರ್ಣ ಮಾಹಿತಿ ಹಾಗೂ ಪ್ಲಾನ್, ಎಸ್ಟಿಮೇಟ್‌ನೊಂದಿಗೆ ಸಲ್ಲಿಸತಕ್ಕದ್ದು.
2. ಯೋಜನೆಯ ರೂಪುರೇಷೆ, ಹಣಕಾಸಿನ ವ್ಯವಸ್ಥೆ ಹಾಗೂ ನಿರ್ವಹಣೆ ಮತ್ತು ಅನುಷ್ಠಾನದ ಸಂಪೂರ್ಣ ಜವಬ್ದಾರಿಯು ಎಸ್. ಪಿ. ಸಂಸೆಯದ್ದಾಗಿರುತ್ತದೆ.
3. ಮಿನಿ ಪವರ್ ಲೂಂ ಪಾರ್ಕ್‌ನ್ನು ಉಪಯೋಗಿಸುವ ಫಲಾನುಭವಿಗಳು ಎಸ್. ಪಿ. ವಿ ಸಂಸೆಯ ಮೂಲಕ ಯೋಜನೆಯನ್ನು ಅನುಷ್ಠಾನಗೊಳಿಸುವುದು.
4. ಮಿನಿ ಪವರ್ ಲೂಂ ಪಾರ್ಕ್‌ನ ನಿರ್ವಹಣಾ ವೆಚ್ಚವನ್ನು ಸದಸ್ಯ ಘಟಕಗಳಿಂದ ಸಂಗ್ರಹಿಸಬಹುದಾಗಿದೆ.
5. ಯೋಜನೆಯ ಅನುಷ್ಠಾನಕ್ಕೆಬೇಕಾದ ಕೈಗಾರಿಕೆ ಸ್ಥಾಪಿಸಲು ಯೋಗ್ಯವಾದ NA ಎಂದು ಘೋಷಣೆಯಾದ 05 ಎಕರೆ ಭೂಮಿಯನ್ನು ಎಸ್.ಪಿ.ವಿ. ಸಂಸ್ಥೆಯು ಒದಗಿಸತಕ್ಕದ್ದು.
6. ಸರ್ಕಾರವು ಯೋಜನೆಗೆ ಆರ್ಥಿಕ ಸಹಾಯ ಒದಗಿಸಿ ಮಂಜೂರಾತಿ ನೀಡಿದ ಕೂಡಲೇ ಎಸ್. ಪಿ. ವಿ ಸಂಸ್ಥೆಯು ತನ್ನ ಆಡಳಿತ ಮಂಡಳಿಯಲ್ಲಿ ಸರ್ಕಾರದ ಪ್ರತಿನಿಧಿಯನ್ನು ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾಮಟ್ಟದ ಅಧಿಕಾರಿಗಳು ನಾಮ ನಿರ್ದೇಶನಗೊಳಿಸಲು ಅವಕಾಶ ಕಲ್ಪಿಸತಕ್ಕದ್ದು.
7. ಯೋಜನೆ ಅನುಷ್ಠಾನದ ಯಾವುದೇ ಹಂತದಲ್ಲಿ ಸರ್ಕಾರದ ಅಧಿಕಾರಿಗಳಿಂದ ಸ್ಥಳ / ಕಾಮಗಾರಿ ಪರಿಶೀಲನೆ ನಡೆಸಲು ಎಸ್. ಪಿ. ವಿಸಂಸ್ಥೆಯು ಅನುವು ಮಾಡಿಕೊಡತಕ್ಕದ್ದು.

ಷರತ್ತು ಮತ್ತು ನಿಬಂದನೆಗಳು

1. ಈ ಯೋಜನೆಗೆ ಸಂಬಂದಿಸಿದ DPR ಅನ್ನು ಜವಳಿ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿನ ತಾಂತ್ರಿಕ ಸಮಿತಿಯಲ್ಲಿ ಮಂಡಿಸಿ, ಯೋಜನೆಯ ಸಾಧ್ಯತೆ, ಸಫಲತೆ, ಅರ್ಹತೆ ಹಾಗೂ ಅವಶ್ಯಕತೆ ಬಗ್ಗೆ ಪರಿಶೀಲಿಸಿ ದೃಢೀಕರಿಸತಕ್ಕದ್ದು.

..3

2. ಈ ಯೋಜನೆಗೆ ಮಂಜೂರಾದ ಅನುದಾನವನ್ನು ಸ್ಥಳೀಯ ಜಿಲ್ಲಾಮಟ್ಟದ ಅಧಿಕಾರಿ ಹಾಗೂ ಎಸ್. ಪಿ. ವಿ ಸಂಸ್ಥೆಯವರ ಜಂಟಿ ಖಾತೆ ತೆರೆದು ಜಮೆ ಇಡತಕ್ಕದ್ದು.
3. ಎಸ್.ಪಿ.ವಿ ಸಂಸ್ಥೆಯವರು 08 ತಿಂಗಳ ಅವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸತಕ್ಕದ್ದು.
4. ಯೋಜನೆಯ ಅನುಷ್ಠಾನಕ್ಕೆ ಅವಶ್ಯಕವಿರುವ ವಿವಿಧ ಇಲಾಖೆಗಳ ಅನುಮತಿಗಳನ್ನು ಸಂಬಂಧ ಪಟ್ಟ ಪ್ರಾಧಿಕಾರಗಳಿಂದ ಅನುಮೋದನೆ ಪಡೆದು ಯೋಜನೆಯನ್ನು ಅನುಷ್ಠಾನಗೊಳಿಸತಕ್ಕದ್ದು.
5. ಕಟ್ಟಡ ಕಾಮಗಾರಿಗಳಿಗೆ ಸ್ಥಳೀಯ ಸಂಸ್ಥೆಗಳಿಂದ ನಿಗದಿತ ಅನುಮೋದನೆ ಪಡೆಯತಕ್ಕದ್ದು.
6. ಸರ್ಕಾರದಿಂದ ಮಂಜೂರಾದ ಅನುದಾನವನ್ನು ಯಾವ ಉದ್ದೇಶಕ್ಕೆ ಮಂಜೂರು ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಮಾತ್ರ ಕಡ್ಡಾಯವಾಗಿ ವಿನಿಯೋಗ ಮಾಡತಕ್ಕದ್ದು.
7. ಸರ್ಕಾರದ ಅನುದಾದ ಬಿಡುಗಡೆಯನ್ನು ಪ್ರೋರೇಟಾ ಬೇಸಿಸ್ ಮೇಲೆ ಬಿಡುಗಡೆ ಮಾಡತಕ್ಕದು. ಅಂದರೆ, ಮೊದಲು ಎಸ್. ಪಿ. ವಿ ಸಂಸ್ಥೆಯವರು ತಮ್ಮ ಬಂಡವಾಳ ಹೂಡಿದ ಪ್ರಮಾಣಕ್ಕೆ ಸಮನಾಗಿ ಸರ್ಕಾರದ ಅನುದಾನವನ್ನು ಬಿಡುಗಡೆ ಮಾಡತಕ್ಕದ್ದು.
8. ಅನುಮೋದಿತ ಯೋಜನಾ ವರದಿಯಂತೆಯೇ ಯೋಜನೆಯನ್ನು ಅನುಷ್ಠಾನಗೊಳಿಸತಕ್ಕದ್ದು.
9. ಯೋಜನಾ ಅನುಷ್ಠಾನದಲ್ಲಿ ಬದಲಾವಣೆಗಳಿದ್ದಲ್ಲಿ ಸರ್ಕಾರದ ಪೂರ್ವಾನುಮತಿ ಪಡೆದು ಅನುಷ್ಠನಗೊಳಿಸತಕ್ಕದ್ದು.
10. ಯಾವುದೇ ಕಾರಣಕ್ಕೆ ಯೋಜನೆಯ ಅನುಷ್ಠಾನ ಸ್ಥಗಿತಗೊಂಡಲ್ಲಿ ಸರ್ಕಾರವು ನಿಗದಿಪಡಿಸುವ ದರದಲ್ಲಿ ಬಡ್ಡಿಯೊಂದಿಗೆ ಸರ್ಕಾರದ ಅನುದಾನವನ್ನು ಎಸ್. ಪಿ. ವಿ ಸಂಸ್ಥೆಯು ಸರ್ಕಾರಕ್ಕೆ ಹಿಂತಿರುಗಿಸತಕ್ಕದ್ದು.
11. ಸರ್ಕಾರವು ನಿಗದಿಪಡಿಸಿರುವ ನಮೂನೆಯಲ್ಲಿ ಷರತ್ತು ಮತ್ತು ನಿಬಂದನೆಗಳ ಬಾಂಡ್‌ನ್ನು ನೀಡತಕ್ಕದ್ದು.
12. ತ್ಯಾಜ್ಯ ವಸ್ತು ನಿರ್ವಹಣೆಯನ್ನು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯ ಸೂಚಿಯಂತೆ ನಿರ್ವಹಿಸತಕ್ಕದ್ದು.
13. ಕೆ.ಟಿ.ಪಿ.ಪಿ ಕಾಯ್ದೆ ಮೇರೆಗೆ ಸದರಿ ಕಾಯ್ದೆಗೆ ಅನುಗುಣವಾಗಿ ಕಾಮಗಾರಿ ಕಾರ್ಯಕ್ರಮಗಳನ್ನು ಪಾರದರ್ಶಕವಾಗಿ ನಿರ್ವಹಿಸತಕ್ಕದ್ದು.
14. ಯೋಜನೆ ಅನುಷ್ಟಾನಕ್ಕೆ ಸಂಬಂಧಿಸಿದಂತೆ ಪ್ರತೀ ಹಂತದಲ್ಲೂ photo ದಾಖಲೀಕರಣವನ್ನು ಖಡ್ಡಾಯವಾಗಿ ನಿರ್ವಹಿಸತಕ್ಕದ್ದು.
15. ಸರ್ಕಾರದಿಂದ ಆಗಿಂದಾಗ್ಗೆ ಹೊರಡಿಸುವ ನಿರ್ದೇಶನಗಳನ್ನು ಎಸ್. ಪಿ. ವಿ ಸಂಸ್ಥೆಯು ಪರಿಪಾಲಿಸತಕ್ಕದ್ದು.
16. ಯೋಜನೆಯ ಹೆಸರು, ಯೋಜನೆಯ ಒಟ್ಟು ಮೊತ್ತ, ಸರ್ಕಾರದಿಂದ ಮಂಜೂರಾದ ಅನುದಾನದ ವಿವರ, ಮಂಜೂರಾದ ವರ್ಷ, ಯೋಜನೆ ಪ್ರಾರಂಭ ಹಾಗೂ ಮುಕ್ತಾಯದ ಅವಧಿ ಮತ್ತು ಕೈಮಗ್ಗ ಮತ್ತು ಜವಳಿ ಇಲಾಖೆಯ ಹೆಸರಿನೊಂದಿಗೆ ಸಾರ್ವಜನಿಕರ ಗಮನಕ್ಕೆ ಬರುವ ರೀತಿಯಲ್ಲಿ ಬೋರ್ಡ್ ಅಥವಾ ಗೋಡೆ ಬರಹವನ್ನು ಬರೆಸತಕ್ಕದ್ದು.

B. Venkatesh 4/5/17

**( ಬಿ.ವೆಂಕಟೇಶಮೂರ್ತಿ)**

ಸರ್ಕಾರದ ಉಪ ಕಾರ್ಯದರ್ಶಿ (ಜವಳಿ)(ಪ್ರ)

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ